ಒಟ್ಟು ಪ್ರಶ್ನೆಗಳ ಸಂಖ್ಯೆ : 26 ]
Total No. of Questions : 26 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 7
[ Total No. of Printed Pages : 7

**ಸಂಕೇತ ಸಂಖ್ಯೆ : 104-K (NS)**

**Code No. : 104-K (NS)**

# ಡಿ.ಇಡಿ. ಪ್ರಥಮ ವರ್ಷ

# D.Ed. FIRST YEAR

# ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ.)

# ಪ್ರಥಮ ಭಾಷೆ – ಕನ್ನಡ

# FACILITATING LEARNING ( LPS )
# FIRST LANGUAGE — KANNADA

**(ಹೊಸ ಪಠ್ಯವಸ್ತು)**
**(New Syllabus)**

ದಿನಾಂಕ : 18. 05. 2019 ]
Date : 18. 05. 2019 ]

ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ]
Time : 10.00 A.M. to 1.00 P.M. ]

[ ಗರಿಷ್ಠ ಅಂಕಗಳು : 60
[ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

***ಸೂಚನೆಗಳು :*** i) ಪ್ರತಿ ಉತ್ತರವನ್ನು ಚಿಂತನೆ ಮಾಡಿ, ಸಂಘಟಿಸಿ ಬರೆಯಲು ಅನುಕೂಲವಾಗಬೇಕೆಂದು ಈ ಪತ್ರಿಕೆಗೆ ಉತ್ತರಿಸಲು 3 ಗಂಟೆಗಳ ಕಾಲಾವಕಾಶ ನೀಡಿದೆ.

ii) ಪ್ರತಿ ಪ್ರಶ್ನೆಗೂ ಸೂಚಿಸಿದಷ್ಟು ಉತ್ತರ ಮಾತ್ರ ಬರೆಯಿರಿ.

## ಭಾಗ – I

**ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ :** 10 × 1 = 10

1. ಶಿಶು ಸಾಹಿತ್ಯ ಸಮೀಕ್ಷೆ ಎಂದರೆ

(A) ವಿದ್ಯಾರ್ಥಿ ಶಿಕ್ಷಕರು ಮಕ್ಕಳ ಸಾಹಿತ್ಯವನ್ನು ಓದುವುದು

(B) ಮಕ್ಕಳ ಸಾಹಿತ್ಯದ ಸಮಗ್ರ ಅರಿವನ್ನು ಪಡೆಯಲು ಪ್ರಯತ್ನಿಸುವುದು

(C) ಹಿರಿಯರು ಮಕ್ಕಳ ಕಥೆಗಳನ್ನು ಸಂಗ್ರಹಿಸುವುದು

(D) ಪ್ರಶಿಕ್ಷಣಾರ್ಥಿಗಳು ಮಕ್ಕಳ ಮನೆಗೆ ಭೇಟಿ ನೀಡುವುದು

2. ಭಾಷಾ ಕಲಿಕೆಗೆ ಸುಲಭವಾಗಿ ಲಭ್ಯವಿರುವ ದೊಡ್ಡ ಸಂಪತ್ತು

(A) ಭೇಟಿ　　(B) ಸಂದರ್ಶನ

(C) ಸಾಹಿತ್ಯ　　(D) ಚರ್ಚೆ

3. ಭಾಷೆಯ ಒಂದು ಗುಣ ಇದು

I. ಬದಲಾವಣೆ

II. ಬಿಗಿತ

III. ಬೆಳವಣಿಗೆ

IV. ಸಂಕುಚಿತ

*ಇವುಗಳಲ್ಲಿ :*

(A) I ಮತ್ತು II ಸರಿ　　(B) II ಮತ್ತು III ಸರಿ

(C) II ಮತ್ತು IV ಸರಿ　　(D) I ಮತ್ತು III ಸರಿ

4. ನಾವು ಮಾತನಾಡುವಾಗಲೆಲ್ಲ ........................... ಇರುತ್ತೇವೆ.

(A) ವಾಚಿಸುತ್ತಲೇ　　(B) ಆಲಿಸುತ್ತಲೇ

(C) ಓದುತ್ತಲೇ　　(D) ಬರೆಯುತ್ತಲೇ

5. ಒಳಗೊಳ್ಳುವಿಕೆಯನ್ನು ಅನುಕೂಲಿಸುವ ಒಂದು ಮುಖ್ಯ ಆಯಾಮ

(A) ದುಬಾರಿ ಸಂಪನ್ಮೂಲಗಳು　　(B) ವಿಶಾಲವಾದ ತರಗತಿಗಳು

(C) ಭಾಷೆಯ ಬಳಕೆ　　(D) ವಿದ್ಯಾವಂತ ಪೋಷಕರು

6. ಆಟಗಳಿಂದ ಶೈಕ್ಷಣಿಕ ಲಾಭ ಪಡೆಯಲು ಮುಖ್ಯವಾದುದು :

I. ಆಟದ ನಿಯಮಗಳನ್ನು ರಚಿಸುವುದು.

II. ವಿರೋಧಿ ತಂಡಕ್ಕೆ ಬೆಂಬಲಿಸುವುದು.

III. ಆಟದ ನಿಯಮಗಳನ್ನು ಅನುಪಾಲಿಸುವುದು.

IV. ಇತರರ ಮೇಲೆ ಒತ್ತಾಯ ಹೇರುವುದು.

*ಇವುಗಳಲ್ಲಿ :*

(A) I ಮಾತ್ರ ಸರಿ　　(B) I ಮತ್ತು III ಸರಿ

(C) II, III ಮತ್ತು IV ಸರಿ　　(D) ಎಲ್ಲವೂ ಸರಿ

7. ಒಳಗೊಳ್ಳುವ ಶಿಕ್ಷಣದಲ್ಲಿ ಮಕ್ಕಳ ಕಲಿಕೆಯ ಮಾಪನ ಹೇಗಿರಬೇಕು

(A) ಶಿಕ್ಷಕ ಕೇಂದ್ರಿತ (B) ಏಕ ರೀತಿ

(C) ವೈವಿಧ್ಯಮಯ (D) ಇವುಗಳೆಲ್ಲವೂ

8. ವಿದ್ಯಾರ್ಥಿಗಳು ಓದುತ್ತಿರುವ ಪಠ್ಯವನ್ನು ಅರ್ಥೈಸಿಕೊಳ್ಳುತ್ತಿದ್ದಾರೆಯೇ ಎಂದು ತಿಳಿಯಲು ನೀಡಬಹುದಾದ ಚಟುವಟಿಕೆ ಎಂದರೆ

(A) ಓದಿದ ಪಠ್ಯದ ಬಗ್ಗೆ ಅಭಿಪ್ರಾಯ ತಿಳಿಸಲು ಅವಕಾಶ ನೀಡುವುದು

(B) ಪಠ್ಯವನ್ನು ಸಾರಾಂಶಿಸಲು ಹೇಳುವುದು

(C) ಪಠ್ಯದ ಬಗ್ಗೆ ವಿಮರ್ಶಾತ್ಮಕವಾಗಿ ಚರ್ಚಿಸಲು ತಿಳಿಸುವುದು

(D) ಇವುಗಳೆಲ್ಲವೂ

9. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಭಾರತೀಯ ಭಾಷೆ ಕಲಿಕೆಯ ವಸ್ತುಸ್ಥಿತಿ ವಿವರಣಾ ಪತ್ರಿಕೆಯ ಪ್ರಕಾರ ಕನ್ನಡ ಭಾಷಾ ತರಗತಿಯ ಮೂಲ ಉದ್ದೇಶಗಳಲ್ಲಿ ಒಂದು

(A) ವಿದ್ಯಾರ್ಥಿಗಳ ಬಹು ಭಾಷಾ ಸಾಮರ್ಥ್ಯವನ್ನು ಉಳಿಸಿ, ಬೆಳೆಸಬೇಕು

(B) ವಿದ್ಯಾರ್ಥಿಗಳ ಏಕ ಭಾಷಾ ಸಾಮರ್ಥ್ಯವನ್ನು ಉಳಿಸಿ, ಬೆಳೆಸಬೇಕು

(C) ವಿದ್ಯಾರ್ಥಿಗಳ ನಂಬಿಕೆ, ಆಚರಣೆಗಳನ್ನು ಉಳಿಸಿ, ಬೆಳೆಸಬೇಕು

(D) ವಿದ್ಯಾರ್ಥಿಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸಬೇಕು

10. ಆಲಿಸುವಿಕೆಯ ಗುಣಮಟ್ಟವನ್ನು ಇದು ಮಿತಿಗೊಳಿಸುತ್ತದೆ

(A) ಭಾಷೆಯ ಬಳಕೆಯಲ್ಲಿನ ವ್ಯತ್ಯಾಸ

(B) ಸುತ್ತಮುತ್ತಲ ಪರಿಸರ ಗದ್ದಲಮಯವಾಗಿರುವುದು

(C) ಆಲಿಸುವ ವಿಷಯದೊಡನೆ ಸಂಬಂಧೀಕರಿಸದಿರುವುದು

(D) ಇವುಗಳೆಲ್ಲವೂ

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ :** $5 \times 2 = 10$

11. 'ಮೌಖಿಕ ಅಭಿವ್ಯಕ್ತಿಗೂ ಮತ್ತು ಸಾಕ್ಷರತೆಗೂ ಗಾಢ ಸಂಬಂಧವಿದೆ' – ಹೇಗೆ ? ಚರ್ಚಿಸಿ.

12. ಭಾಷಾ ಕಲಿಕೆಯಲ್ಲಿ ಸ್ಥಳೀಯ ಸಂಪನ್ಮೂಲದ ಮಹತ್ವವನ್ನು ಚರ್ಚಿಸಿ.

13. ದೊಡ್ಡ ಪುಸ್ತಕ (ಬಿಗ್ ಬುಕ್) ತಯಾರಿಸುವಾಗ ಗಮನಿಸಬೇಕಾದ ಅಂಶಗಳನ್ನು ಪಟ್ಟಿಮಾಡಿ.

14. ವಿದ್ಯಾರ್ಥಿಗಳ ಕಲಿಕೆಯನ್ನು ಅನುಕೂಲಿಸುವಲ್ಲಿ ಮಿಂಚುಪಟ್ಟಿಗಳ ಬಳಕೆಯಿಂದಾಗುವ ಪ್ರಯೋಜನಗಳಾವುವು ?

15. ಓದು ಮತ್ತು ಬರವಣಿಗೆಯಲ್ಲಿ ಬಹುಮಾಧ್ಯಮದ ಪ್ರಭಾವವನ್ನು ತಿಳಿಸಿ.

16. ನೀವು ಬಾಲ್ಯದಲ್ಲಿ ಆಡಿರುವ ಯಾವುದಾದರೂ ನಾಲ್ಕು ಆಟಗಳನ್ನು ಹೆಸರಿಸಿ.

17. ಮಗುವಿನ ಮಾತೃಭಾಷೆ ಹಾಗೂ ಶಾಲೆಯ ಭಾಷೆ – ಇವೆರಡರ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಸೂಚಿಸಿ.

18. ನಿಮ್ಮ ತರಗತಿಯಲ್ಲಿ ಮಂದಗತಿ ಕಲಿಕಾದಾರರನ್ನು ಹೇಗೆ ಪತ್ತೆಹಚ್ಚುವಿರಿ ?

## ಭಾಗ – III

**ಈ ಕೆಳಗಿನ ಪ್ರತಿ ಪ್ರಶ್ನೆಗೂ 'ಅ' ಮತ್ತು 'ಆ' ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ :** $8 \times 5 = 40$

19. ಅ) ನಲಿ–ಕಲಿ ಪದ್ಧತಿ ಬಹು ಹಂತದ ಕಲಿಕೆಯನ್ನು ಅನುಕೂಲಿಸಲು ಹೇಗ ಉಪಯುಕ್ತವಾಗಿದೆ ? ವಿಶ್ಲೇಷಿಸಿ.

*ಅಥವಾ*

ಆ) ಆಟ ಹಾಗೂ ಕಲಿಕೆಯ ನಡುವಿನ ಸಂಬಂಧಗಳನ್ನು ಉದಾಹರಣೆಯೊಂದಿಗೆ ವಿಶ್ಲೇಷಿಸಿ.

20. ಅ) ಎರಡು ಮೌಖಿಕ ಕೌಶಲಗಳನ್ನು ಪಟ್ಟಿಮಾಡಿ. ಅವುಗಳನ್ನು ಮಕ್ಕಳಲಿ ಬೆಳೆಸಲು ಯಾವ ರೀತಿಯ ಚಟುವಟಿಕೆಗಳನ್ನು ನಡೆಸಬಹುದು ಎನ್ನುವುದನ್ನು ಉದಾಹರಣೆಯೊಂದಿಗೆ ಚರ್ಚಿಸಿ.

***ಅಥವಾ***

ಆ) ಕನ್ನಡ ಭಾಷಾ ವೈವಿಧ್ಯತೆಯನ್ನು ವಿವರಿಸಿ.

21. ಅ) III ನೇ ತರಗತಿಯ ಮಕ್ಕಳಲ್ಲಿ ಆಲಿಸುವಿಕೆ ಮತ್ತು ಮೌಖಿಕ ಅಭಿವ್ಯಕ್ತಿಯಲ್ಲಿ ಕಂಡಬರುವ ಸಮಸ್ಯೆಗಳಾವುವು ? ಈ ಸಮಸ್ಯೆಗಳನ್ನು ಶಿಕ್ಷಕರಾಗಿ ನೀವು ಹೇಗೆ ಪರಿಹರಿಸುವಿರಿ ?

***ಅಥವಾ***

ಆ) ಮಕ್ಕಳಿಂದ ಕಥೆ ಹೇಳಿಸಲು ಶಿಕ್ಷಕರಾಗಿ ನೀವು ಮಾಡಿಕೊಳ್ಳಬೇಕಾದ ತಯಾರಿಗಳೇನು ? ಮಕ್ಕಳಿಂದ ಕಥೆ ಹೇಳಿಸುವುದರಿಂದಾಗುವ ಪ್ರಯೋಜನಗಳಾವುವು ?

22. ಅ) ಮಕ್ಕಳಲ್ಲಿ ಓದುವಿಕೆಯನ್ನು ಅನುಕೂಲಿಸಲು ಶಿಕ್ಷಕರಾಗಿ ನೀವು ಹಮ್ಮಿಕೊಳ್ಳುವ ಯಾವುದಾದರೂ ಎರಡು ಚಟುವಟಿಕೆಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

***ಅಥವಾ***

ಆ) ವಿದ್ಯಾರ್ಥಿಗಳ ಕೈಬರಹವನ್ನು ಉತ್ತಮಪಡಿಸಲು ಕಾಪಿ ಬರೆಯುವ ಚಟುವಟಿಕೆಯನ್ನು ಹಮ್ಮಿಕೊಳ್ಳುವಾಗ ಶಿಕ್ಷಕರಾಗಿ ನೀವು ಗಮನಿಸುವ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

23. ಅ) IV ನೇ ತರಗತಿಯ ಕನ್ನಡ ವಿಷಯದಲ್ಲಿ ನಿಮಗಿಷ್ಟವಾದ ಯಾವುದಾದರೊಂದು ಗದ್ಯಪಾಠದ ಕಲಿಕೆಯನ್ನು ಅನುಕೂಲಿಸುವುದಕ್ಕೆ ಸಂಬಂಧಿಸಿದಂತೆ ತೊಡಗಿಸಿಕೊಳ್ಳುವುದು ( Engage ) ಮತ್ತು ಪರಿಶೋಧಿಸುವ ( Explore ) ಹಂತಗಳಿಗೆ ಸಂಬಂಧಿಸಿದಂತೆ ಪಾಠಯೋಜನೆ ತಯಾರಿಸಿ.

***ಅಥವಾ***

ಆ) ಮಗುವನ್ನು ಶಾಲೆ ಭಾಷೆಗೆ ಒಗ್ಗಿಸಲು ಶಿಕ್ಷಕರಾಗಿ ನೀವು ತೆಗೆದುಕೊಳ್ಳಬಯಸುವ ಕ್ರಮಗಳ ಬಗ್ಗೆ ಬರೆಯಿರಿ.

24. ಅ) ವಿದ್ಯಾರ್ಥಿಗಳಲ್ಲಿ ಓದುಗಾರಿಕೆಯನ್ನು ಬೆಳೆಸಲು ಮೌಖಿಕ ಕೌಶಲಗಳಲ್ಲಿ ಪ್ರೌಢಿಮೆ ಸಾಧಿಸುವುದು ಮುಖ್ಯವೇ ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ.

*ಅಥವಾ*

ಆ) 'ಆರಂಭಿಕ ಹಂತಗಳಲ್ಲಿ ಆಲಿಸುವ ಹಾಗೂ ಮಾತನಾಡುವ ಕೌಶಲಗಳ ಮೌಲ್ಯಾಂಕನವು ಅನೌಪಚಾರಿಕವಾಗಿ ನಡೆಸುವುದು ಸೂಕ್ತ ಹಾಗೂ ಉಪಯುಕ್ತ'. – ಈ ಹೇಳಿಕೆಯನ್ನು ಸಮರ್ಥಿಸಿ.

25. ಅ) ಒಳಗೊಳ್ಳುವಿಕೆ ಎಂದರೇನು ? ಒಳಗೊಳ್ಳುವ ತರಗತಿಯ ಲಕ್ಷಣಗಳಾವುವು ?

*ಅಥವಾ*

ಆ) ಶ್ರವಣದೋಷ ಹಾಗೂ ಮಾತನಾಡುವ ದೋಷವಿರುವ ಮಕ್ಕಳ ಕಲಿಕೆಯಲ್ಲಿ ಕಂಡುಬರುವ ಅಡೆತಡೆಗಳಾವುವು ? ಈ ರೀತಿಯ ಮಕ್ಕಳನ್ನು ಒಳಗೊಳ್ಳುವಂತೆ ಮಾಡಲು ಶಿಕ್ಷಕರು ತೆಗೆದುಕೊಳ್ಳುವ ಕ್ರಮಗಳಾವುವು ?

26. ಅ) "ಒಗ್ಗಟ್ಟಿನಲ್ಲಿ ಬಲವಿದೆ" – ಈ ಗಾದೆ ಮಾತನ್ನು ಬಳಸಿ, ಸೂಕ್ತವಾದ ಒಂದು ಕಥೆಯನ್ನು ಕನಿಷ್ಠ ಹತ್ತು ವಾಕ್ಯ ಆಗುವಂತೆ ರಚಿಸಿ.

*ಅಥವಾ*

ಆ) ಈ ಕೆಳಗಿನ ಕಥೆಗೆ ಸಂಬಂಧಿಸಿದಂತೆ

i) ಸೂಕ್ತವಾದ ಶೀರ್ಷಿಕೆ

ii) ಚಿಂತನೆ ಬಯಸುವ ನಾಲ್ಕು ಪ್ರಶ್ನೆಗಳು ಹಾಗೂ

iii) ಮಾಹಿತಿ ಬಯಸುವ ನಾಲ್ಕು ಪ್ರಶ್ನೆಗಳನ್ನು ರಚಿಸಿ.

ಒಂದೂರಿನಲ್ಲಿ ಮಾದಯ್ಯನೆಂಬ ಒಬ್ಬ ವರ್ತಕನಿದ್ದನು. ಆತ ಅಕ್ಕಿ ಹಾಗೂ ಇನ್ನಿತರ ದವಸ–ಧಾನ್ಯಗಳನ್ನು ವ್ಯಾಪಾರ ಮಾಡಿ ಕೈತುಂಬಾ ಹಣ ಗಳಿಸುತ್ತಿದ್ದನು. ಆತನಿಗೆ ಮತ್ತಷ್ಟು ಹಣ ಕೂಡಿಡಬೇಕೆಂಬ ಬಯಕೆಯಾಗಿ, ಜನರಿಗೆ ಮೋಸ ಮಾಡುತ್ತಾ ದವಸ–ಧಾನ್ಯಗಳನ್ನು

ಗೋದಾಮಿನಲ್ಲಿ ಕೂಡಿಟ್ಟು, ಮಾರುಕಟ್ಟೆಯಲ್ಲಿ ಕೃತಕ ಅಭಾವ ಸೃಷ್ಟಿಸಿ, ಬೆಲೆ ಗಗನಕ್ಕೇರುವಂತೆ ಮಾಡಿದನು.

ಸಣ್ಣಪುಟ್ಟ ವ್ಯಾಪಾರಿಗಳು ವ್ಯಾಪಾರಕ್ಕೆ ಸರಂಜಾಮುಗಳು ದೊರೆಯದೆ ಅಂಗಡಿ ಬಾಗಿಲು ಮುಚ್ಚಿದರೆ ಮಾದಯ್ಯನ ಮಳಿಗೆಯಲ್ಲಿ ಮಾತ್ರ ದುಪ್ಪಟ್ಟು ಬೆಲೆಯಲ್ಲಿ ಜೋರಾಗಿ ವ್ಯಾಪಾರ ನಡೆಯುತ್ತಿತ್ತು.

ಊರ ಜನರು ಏಕಿಷ್ಟು ಬೆಲೆ ಜಾಸ್ತಿಯಾಗಿದೆ ಎನ್ನಲು ಸರ್ಕಾರದ ಮೇಲೆ, ಆಡಳಿತ ಪಕ್ಷದವರ ಆಟವೇ ಕಾರಣ ಎನ್ನುತ್ತಿದ್ದನು.

ಹೊಸದಾಗಿ ಕಟ್ಟಿಸಿದ ಗೋದಾಮಿನಲ್ಲಿ ಒಂದು ವರ್ಷ ಮಾರಲು ಬೇಕಾಗುವಷ್ಟು ಅಕ್ಕಿ ಮೂಟೆಗಳನ್ನು ಕೂಡಿಟ್ಟನು. ಸ್ವಲ್ಪ ದಿನಗಳ ನಂತರ ಅವುಗಳ ಭದ್ರತೆಯನ್ನು ಮಾದಯ್ಯ ಪರಿಶೀಲಿಸಿದಾಗ, ಇಲಿಗಳ ಹಿಂಡು ಅಕ್ಕಿ ಕಾಳುಗಳನ್ನು ಹೊತ್ತೊಯ್ಯಲಾರಂಭಿಸಿದರಂ, ಕರಿ ಹುಳುಗಳು ಅಕ್ಕಿ ಮೂಟೆಯಲ್ಲಿನ ಅಕ್ಕಿಯಲ್ಲಿ ತೂತು ಕೊರೆಯಲಾರಂಭಿಸಿದ್ದವು.